SRI G. B. SHANKAR RAO.—Depending upon the exigency and urgency it will be done. Normally, throughout the world and in our country the general holiday is on Sunday. So we will follow the calendar.....

MR. SPEAKER.—The general holiday here and elsewhere is on Sundays. Let us not elaborate on that...

Sampekatta Dam across Chakra River

SRI H. GANGADHARAN (Krishnaraja) SRI K. RAMBHAT (Puttur) SRI M. G. JARTHARGHAR (Hubli).— Will the Chief Minister be pleased to state.—

(a) whether it is a fact that a breach was noticed in the Sampekatta Dam across Chakra River in Shimoga District ;

(b) whether there is any allegation about the defects in the construction of this project ;

(c) whether it is not a fact that officers, Technicians and co. structors are mismanaging the whole affairs?

SRI R. GUNDU RAO (Chief Minister).—

(a) Yes. During monsoons of 1979 and 1980.

(b) No.

(c) No.

ಶ್ರೀ ಎಂ.ಸಿ. ಬಸಪ್ಪ.—ನನ್ನ ಎರಡನೇ ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಅದೇ ರೀತಿ ನನ್ನ ಮೂರನೇ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಮತ್ತೆ ಯಾವ ಕಾರಣಕ್ಕಾಗಿ ಈ ಒಂದು ಆಣೆಕಟ್ಟಿನಲ್ಲಿ ಬಿರುಕು ಉಂಟಾಯಿತು ಎಂಬುದನ್ನು ಹೇಳುತ್ತೀರಾ ?

ಶ್ರೀ ಜಿ.ಎಚ್. ಆಶ್ವತ್ಥ್‌ರೆಡ್ಡಿ (ಮುಖ್ಯಮಂತ್ರಿಗಳ ಪರವಾಗಿ).—ಜಾಸ್ತಿ ಮಳೆ ಬಂದ ಕಾರಣದಿಂದ ಆ ರೀತಿಯಾಗಿದೆ. ಜೊತೆಗೆ ಇದನ್ನು ಟೆಂಪರರಿಯಾಗಿ ಕಟ್ಟಿರುವುದು. ಇದನ್ನು ರಿಪೇರಿ ಮಾಡಲು ೭೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ೧೯೮೨ರ ಹೊತ್ತಿಗೆ ಚಕ್ರಾ ಡ್ಯಾಂ ಕೆಲಸ ಮುಗಿಯುವುದರಿಂದ ಮತ್ತು ಆ ಸಮಯದಲ್ಲಿ ಈ ಸಂಪೆಕಟ್ಟೆ ಆಣೆಕಟ್ಟು ಮುಳುಗಡೆಯಾಗುವುದರಿಂದ ಈಗ ಇದರ ರಿಪೇರಿ ಕೆಲಸ ಕೈಗೊಳ್ಳುವುದು ಫೀಜಿಬಲ್ ಅಲ್ಲ ಎಂದು ಕೈಬಿಟ್ಟಿದ್ದೇವೆ.

ಶ್ರೀ ಎಂ.ಸಿ. ಬಸಪ್ಪ.—ನೆರೆ ಹಾವಳಿಯಿಂದ ಬಿರುಕು ಬಿಟ್ಟಿದೆ ಎಂದು ಹೇಳಿದ್ದೀರಿ. ಆದರೆ ಈ ಆಣೆಕಟ್ಟನ್ನು ಕಟ್ಟುವಾಗಲೇ, ಇದರ ಪ್ಯಾಸ್ಪಿಮಮ್ ಫ್ಲಡ್ ಲೆವೆಲ್ ಎಷ್ಟಿರಬೇಕು ಮತ್ತು ಕೆರೆಯ ಮಟ್ಟ ಯಾವ ರೀತಿ ಇರಬೇಕು ಎಂಬುದನ್ನು ಪರಿಶೀಲನೆ ಮಾಡಿರಲಿಲ್ಲವೇ ?

ಶ್ರೀ ಜಿ. ಎಚ್. ಆಶ್ವತ್ಥ ರೆಡ್ಡಿ.— ಇದನ್ನು ೧೪ ಲಕ್ಷ ರೂ.ಗಳ ವೆಚ್ಚದಲ್ಲಿ ಟೆಂಪರರಿಯಾಗಿ ಕಟ್ಟಿರುವುದು. ಇದು ಶಾಶ್ವತವಾದಂಥ ಆಣೆಕಟ್ಟು ಅಲ್ಲ. ಪವರ್ ಉತ್ಪತ್ತಿಗೆ ಬೇಕಾದ ನೀರನ್ನು ಪಡೆದುಕೊಳ್ಳಲು ಇದನ್ನು ಕಟ್ಟಿದ್ದು. ಆದರೆ ಜಾಸ್ತಿ ಮಳೆಬಂದಾಗ ಇದು ಬಿರುಕು ಬಿಟ್ಟಿದೆ. ಇದರ ರಿಪೇರಿಗೆ ೭೦ ಲಕ್ಷ ರೂ.ಗಳು ಖರ್ಚು ಬರುವುದರಿಂದ, ಇದು ಫೀಜಿಬಲ್ ಅಲ್ಲವೆಂದು ತಜ್ಞರು ಹೇಳಿದ ಪ್ರಯುಕ್ತ ಕೈಬಿಟ್ಟಿದ್ದೇವೆ.

ಶ್ರೀ ಎಂ.ಸಿ. ಬಸಪ್ಪ.—ಈ ಅಣೆಕಟ್ಟೆಯಲ್ಲಿ ಬಿರುಕು ಬಿಟ್ಟ ಕಾರಣದಿಂದ, ಇದರಿಂದ ಉಪಯೋಗವೂ ಇಲ್ಲದಂತೆ ಆಯಿತು ಮತ್ತು ಇದಕ್ಕೆ ಖರ್ಚು ಮಾಡಿದ ಹಣವೂ ವ್ಯರ್ಥವಾದಂತೆ ಆಯಿತು ಅಲ್ಲವೇ ?

ಶ್ರೀ ಜಿ.ಎಚ್. ಅಶ್ವತ್ಥ ರೆಡ್ಡಿ.—ಈ ಅಣೆಕಟ್ಟಿನಿಂದ ಉಪಯೋಗವಾಗಿದೆ. ೭೦ ಲಕ್ಷ ರೂ.ಗಳ ವರೆಗೆ ಆದಾಯ ಬಂದಿದೆ. ಒಂದೆರಡು ವರ್ಷಗಳ ಅನುಕೂಲಕ್ಕಾಗಿ ಇದನ್ನು ಟೆಂಪರರಿಯಾಗಿ ಕಟ್ಟಿಸಿದ್ದು. ಚಕ್ರಾ ಡ್ಯಾಂ ಕೆಲಸ ಮುಗಿದ ಮೇಲೆ ಆದರಲ್ಲಿ ಇದು ಮುಳುಗಿ ಹೋಗುತ್ತದೆ. ಆದಕಾರಣ ರಿಪೇರಿ ಕೆಲಸ ಮಾಡಿಸಿಲ್ಲ.

ಶ್ರೀ ಆನಂದಕುಂದ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ಮುಖ್ಯ ಅಣೆಕಟ್ಟು ಕಟ್ಟದೆ ಹಿಂಬದಿ ಸಣ್ಣ ಅಣೆಕಟ್ಟು ಕಟ್ಟಿ ಇದು ಪೂರೈಸದೇ ಇದ್ದುದರಿಂದ ಈ ರೀತಿ ಆಗಿದೆಯಲ್ಲವೇ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ವಾಟರ್ ಡೈವರ್ಸ್ ಮಾಡಬೇಕಾದರೆ ಸಣ್ಣ ಅಣೆಕಟ್ಟು ಕಟ್ಟಲೇ ಬೇಕು.

ಶ್ರೀ ಆನಂದಕುಂದ ಹೆಗ್ಗಡೆ.— ಮುಖ್ಯ ಅಣೆಕಟ್ಟು ಪೂರೈಸದೆ ಇದನ್ನು ಕಟ್ಟಿದ್ದರಿಂದ ಹೀಗಾಗಿದೆಯಲ್ಲವೇ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಮುಖ್ಯ ಅಣೆಕಟ್ಟು ಇದರ ಸಹಾಯದಿಂದ ಇರುತ್ತದೆ. ವಾಟರನ್ನು ಡೈವರ್ಸ್‌ಮಾಡಲಿಕ್ಕೆ ಸಣ್ಣ ಅಣೆಕಟ್ಟನ್ನು ಕಟ್ಟಲೇಬೇಕು. ನಂತರ ಅದು ಆಟೊಮ್ಯಾಟೀಕ್ ಆಗಿ ಡಿಮಾಲಿಷ್ ಆಗುತ್ತದೆ. ೨ ವರ್ಷಗಳಲ್ಲಿ ಮತ್ತೆ ಕಟ್ಟಬೇಕಾದರೆ ೭೦ ಲಕ್ಷ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ತಜ್ಞರು ಬೇಡ ಎಂದು ರಿಜೆಕ್ಟ್ ಮಾಡಿದ್ದಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಈ ವಿಷಯ ನನ್ನ ತಾಲ್ಲೂಕಿಗೆ ಸಂಬಂಧಪಟ್ಟದ್ದು. ಆಲ್ಲಿ ಆಗಿರತಕ್ಕದು ಏನೆಂದರೆ, It is a defective work. ಮೈನ್ ಅಣೆಕಟ್ಟನ್ನು ಕಟ್ಟಿಬಿಟ್ಟು ಇದನ್ನು ಇಲ್ಲಿ ಕಟ್ಟಬೇಕು. ಆದನ್ನು ಕಟ್ಟದೆ They have started the work. ಆದ್ದರಿಂದ ಅಣೆಕಟ್ಟು ಲೀಕೇಜಾಗಿದೆ. ಇದಕ್ಕೆ ಲಕ್ಷಾಂತರ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಆಗಿದೆ. What action are you going to take against the persons who are negligent ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಇದು ೧೪ ಲಕ್ಷ ರೂಪಾಯಿಗಳ ಡ್ಯಾಂ. ಒಂದು ಸಾರಿ ಹೋದ ಮೇಲೆ ಇನ್ನೊಂದು ಸಾರಿ ರಿಪೇರಿ ಮಾಡುವುದಕ್ಕೆ ೪ ಲಕ್ಷ ರೂಪಾಯಿ ಖರ್ಚುಮಾಡಿದ್ದಾರೆ. ಈಗ ಇನ್ನೊಂದು ಸಾರಿ ರಿಪೇರಿ ಮಾಡಲಿಕ್ಕೆ ೭೦ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಹೇಳಿದ್ದಾರೆ. ತಜ್ಞರು ಇದು ಅನ್‌ನೆಸ್ಸರಿ ಎಂದು They have rejected that, ಈ ಡ್ಯಾಂ ಜೋರಾಗಿ ಮಳೆ ಬಂದರೆ ತಡೆಯುವುದಿಲ್ಲ ಎನ್ನವುದು ಗೊತ್ತು, ಆದರೂ ಒಂದು ವರ್ಷಕ್ಕೆ ಸರ್ಕಾರಕ್ಕೆ ಆದಾಯ ಮಾಡಿದ್ದಾರೆ, ೭೦ ಲಕ್ಷ ರೂಪಾಯಿ ಬಂದಿದೆ.

ಶ್ರೀ ಎ. ಬಿ. ಕೊಡಗಿ.—ಮಾನ್ಯ ಅಧ್ಯಕ್ಷರೆ. ಈ ಸಂಪೆಕಟ್ಟೆ ಆಣೆಕಟ್ಟು ಬಿರುಕು ಬಿಟ್ಟಿರುವುದು ಎರಡನೇ ಬಾರಿ. ಹಿಂದೆ ಎರಡು ಬಾರಿ ಬಿರಕಿಕು ಬಿಟ್ಟಿತ್ತು ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ. ಈಗ ಮೂರನೇ ಬಾರಿ ಬಿರುಕು ಬಿಟ್ಟಿರುವುದಕ್ಕೆ ರಿಪೇರಿ ಮಾಡಲು ಎಷ್ಟು ಲಕ್ಷ ರೂಪಾಯಿಗಳ ಎಸ್ಟಿಮೇಟ್ ತಯಾರಾಗಿದೆ.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಮೂರನೇ ಬಾರಿಗೆ ಎಸ್ಟಿಮೇಟ್ ಮಾಡಿಲ್ಲ, ತಜ್ಞರು ಬೇಕಾಗಿಲ್ಲ ಎಂದು ಹೇಳಿದ್ದಾರೆ. ಚಕ್ರ ಮೈನ್ ಡ್ಯಾಂಅನ್ನು ಮಾತ್ರ ಕನ್‌ಸ್ಟ್ರಕ್ಟ್ ಮಾಡುತ್ತೇವೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಇದರಲ್ಲಿ ಟ್ರಿಕ್ ಇದೆ. ತಾವು ದಯವಿಟ್ಟು ಎನ್‌ಕ್ವೈರಿ ಮಾಡಬೇಕು. ಪದೇ ಪದೇ ಕೇಳುವುದು ಕಟ್ಟುವುದು ಮಾಡಿದ್ದಾರೆ. ಹೀಗೇಕೆ ಮಾಡಿದ್ದಾರೆ, ಯಾರಿಗೋಸ್ಕರ ಮಾಡಿದ್ದಾರೆ, ಯಾರಿಗೆ ತುಂಬಲಿಕ್ಕೆ ಮಾಡಿದ್ದಾರೆ. ದಯವಿಟ್ಟು ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕು. ೯೦ ಲಕ್ಷ ರೂಪಾಯಿ ಹುಡುಗಾಟಿಕೆ ದುಡ್ಡಲ್ಲ.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಎರಡನೇ ಸಾರಿ ಅದಕ್ಕೆ ಬೇಕಾಗಿಲ್ಲ ಎಂದು ಬಿಟ್ಟಿದ್ದೇವೆ.

ಅಧ್ಯಕ್ಷರು.—ಏತಕ್ಕೋಸ್ಕರ ಹಾಗೆ ಮಾಡಿದರು, ಸರ್ಕಾರ ಅನುಮತಿ ಕೊಟ್ಟಿತ್ತೇ ಎಂದು ಕೇಳುತ್ತಿದ್ದಾರೆ.

ಶ್ರೀ ಜಿ. ಹೆಚ್. ಆಶ್ವತ್ಥರೆಡ್ಡಿ.—ಲಿಂಗನಮಕ್ಕಿಗೆ ವಾಟರ್ ಸಪ್ಲೈ ಮಾಡಬೇಕಾದರೆ ಚಕ್ರ ಡ್ಯಾಂ ಕಟ್ಟಬೇಕಾಗಿತ್ತು. In the meanwhile the experts have given their opinion to have a small dam. *i. e...*

ಅಧ್ಯಕ್ಷರು.—ಎರಡು ಸಾರಿ ಅಣೆಕಟ್ಟು ಕಟ್ಟಿದ್ದಾರೆ, ಈಗ ಮೂರನೇ ಸಾರಿ ಬ್ರೇಕ್ ಆಗಿದೆ. ಯಾತಕ್ಕೋಸ್ಕರ ಕಟ್ಟಿದರು ಎಂದು ಹೇಳಿದ್ದಾರೆ.

ಶ್ರೀ ಜಿ. ಹೆಚ್. ಆಶ್ವತ್ಥರೆಡ್ಡಿ.— ವಾಟರ್ ಡೈವರ್ಟ್ ಮಾಡುವುದಕ್ಕೋಸ್ಕರ.

SRI S. M. SHEERNALLY CHANDRASEKHAR:—Entire scheme is divert the water. ಆ ಪ್ರಶ್ನೆ ಬರಲಿಲ್ಲ. ಒಂದು ಸಲ ಅಣೆಕಟ್ಟು ಆಯಿತು. ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಬಂದರು, ಸರಿಯಲ್ಲ ಎಂದು ಒಪಿನಿಯನ್ ಕೊಟ್ಟರು. ಮತ್ತೆ ಕಟ್ಟಿದರು. Repeatedly they are doing that. ಆದ್ದರಿಂದ ಇದರಲ್ಲಿ ಏನು ಆಡಗಿದೆ ಎಂದು ಎಗ್ಸಾಮಿನ್ ಮಾಡುತ್ತೀರಾ ?

ಶ್ರೀ ಜಿ. ಹೆಚ್. ಆಶ್ವತ್ಥರೆಡ್ಡಿ. – ಎರಡನೇ ಸಾರಿ ರಿಜೆಕ್ಟ್ ಆಗಿದೆ. ಇದಕ್ಕೆ ೭೦ ಲಕ್ಷ ರೂಪಾಯಿ ಆಗುತ್ತದೆ, ಫೀಸಿಬಲ್ ಅಲ್ಲ, ಇದು ಬೇಕಾಗಿಲ್ಲ ಎಂದು ಹೇಳಿದ್ದಾರೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳಿದಂತೆ ಆಂಥಾದ್ದೇನಾದರೂ ಇದ್ದರೆ ಅದನ್ನು ಎಗ್ಸಾಮಿನ್ ಮಾಡಿಸುತ್ತೇನೆ.

Decentralisation of KGID:

64. SRI. S. S. ARAKERI (Balloli).—Will the Minister for Finance and Tourism be pleased to state.—

(a) whether the Governmment took decision in 1976 to decentralise the KGID in view of the Compulsory Life Insurance Scheme for all State Government Servants throughout Karnataka.

(b) whether on account of non-opening of district level offices of the KGID the large numbers of death claims, maturity claims and the loans have not been effectively attend throughout the State causing great hardships to the Government servants as well as the L. R. S. of the deceased Government servants in all 19 Districts in the State.

(c) whether it is a fact that large section of KGID employees are against the decentralisation of KGID and are against for star-the new units as District Head quarters throughout Karnataka.

(d) If no, what steps Government propose to take and when.

(e) the number of SC/ST employees and its percentage in KGID ?

SRI M. VEERAPPA MOILY (Minister for Finance and Tourim).—

(a) Yes.

(b) This is partly true because initially the attention of the District level Offices was on getting most of the